# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : **1358**

ಸದಸ್ಯರ ಹೆಸರು : ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 16-03-2026

ಉತ್ತರಿಸುವ ಸಚಿವರು ಮಾನ್ಯ ಇಂಧನ ಸಚಿವರು

****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಐದು ವಿದ್ಯುತ್ ಸರಬರಾಜು ಕಂಪನಿಗಳು (ESCOMs) ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ವಿದ್ಯುತ್ ದರ ಏರಿಕೆಗೆ ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳು, ವಿದ್ಯುತ್ ಕಾಯ್ದೆ 2003 ರ ಸೆಕ್ಷನ್ 61 ಮತ್ತು 62 ಮತ್ತು ಮಾನ್ಯ ಕವಿನಿ ಆಯೋಗದ ಕೆ.ಇ.ಆರ್.ಸಿ. (ಬಹು ವರ್ಷದ ಪ್ರಸರಣ, ಮತ್ತು ರೀಟೈಲ್ ವಿತರಣೆ ಜಕಾತಿ) ವಿನಿಯಮಗಳು 2024, ದಿನಾಂಕ: 24.06.2024 ರ ಉಪನಿಬಂಧನೆ 5, 14 ಮತ್ತು 15 ರ ಅಡಿಯಲ್ಲಿ ಜಕಾತಿ ಪರಿಷ್ಕರಣೆ (ಆದಾಯ ಕೊರತೆ / ಹೆಚ್ಚುವರಿ ಯನ್ನು ಒಳಗೊಂಡಂತೆ) ಅರ್ಜಿಯನ್ನು, ಮುಂದಿನ ಹಣಕಾಸು ವರ್ಷದ ಪ್ರಾರಂಭದ 120 ದಿನಗಳ ಮೊದಲು ಸಲ್ಲಿಸಲು ಅವಕಾಶವಿರುತ್ತದೆ.<br><br>ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ದಿನಾಂಕ 27.03.2025 ರಂದು ಆರ್ಥಿಕ ವರ್ಷ 2025-26, 2026-27 ಹಾಗೂ 2027-28ಕ್ಕೆ ಸಂಬಂಧಿಸಿದಂತೆ ಬಹು ವಾರ್ಷಿಕ ದರ ಪರಿಷ್ಕರಣೆ ಆದೇಶ ಹೊರಡಿಸಲಾಗಿರುತ್ತದೆ.<br><br>ವಿದ್ಯುತ್ ಸರಬರಾಜು ಕಂಪನಿಗಳು ಆರ್ಥಿಕ ವರ್ಷ 2024-25ರ ವಾರ್ಷಿಕ ಕಾರ್ಯನಿರ್ವಾಹಣ ಪರಿಶೀಲನೆ (Annual Performance Review Truing up) ಅರ್ಜಿಯನ್ನು29.11.2025 ರಂದು ಆಯೋಗಕ್ಕೆ ಸಲ್ಲಿಸಿದೆ. |
| ಆ | ಈ ಪ್ರಸ್ತಾವನೆಯಲ್ಲಿ ಪ್ರತಿ ಯೂನಿಟ್‌ಗೆ ಸರಾಸರಿ ಎಷ್ಟು ಪೈಸೆ ಹೆಚ್ಚಳ ಮಾಡಲು ಕೋರಲಾಗಿದೆ; ಹಾಗೂ ಬೆಸ್ಕಾಂ (BESCOM), ಜೆಸ್ಕಾಂ (GESCOM), ಚೆಸ್ಕಾಂ (CESC), ಹೆಸ್ಕಾಂ (HESCOM), ಮೆಸ್ಕಾಂ (MESCOM) ಬೇಡಿಕೆ ಇಟ್ಟಿರುವ ಪ್ರತ್ಯೇಕ ದರಗಳು ಎಷ್ಟು? | ದಿನಾಂಕ 29.11.2025 ರ APR ಅರ್ಜಿಗೆ ಸಂಬಂಧಿಸಿದಂತೆ 2024-25ನೇ ಸಾಲಿನ, ಈ ಕೆಳಕಂಡಂತೆ ವಿದ್ಯುತ್ ಸರಬರಾಜು ಕಂಪನಿಗಳು ವಿದ್ಯುತ್ ಪರಿಷ್ಕರಣೆ ಕೋರಿವೆ. |

| ವಿಸಕಂಪನಿ | ಆದಾಯ ಕೊರತೆ (ರೂ. ಕೋಟಿಗಳಲ್ಲಿ) |
|---|---|
| ಬೆವಿಕಂ | 2,802.80 |
| ಚಾವಿಸನಿನಿ | 528.12 |
| ಮವಿಕಂ | 83.11 |
| ಹುವಿಕಂ | 604.49 |
| ಗುವಿಕಂ | 490.62 |
| ಹುಕ್ಕೇರಿ | 6.84 |
| **ಒಟ್ಟು** | **4,516** |

| | | |
|---|---|---|
| ಇ) | ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳು ಒಟ್ಟಾರೆ 4,500 ಕೋಟಿ ರೂಪಾಯಿಗಳ ನಷ್ಟದಲ್ಲಿ ಇರುವುದು ನಿಜವೇ; ಕೇವಲ ಬೆಸ್ಕಾಂ ಒಂದೇ 2024-25 ನೇ ಸಾಲಿನಲ್ಲಿ 2,800 ಕೋಟಿ ರೂಪಾಯಿಗಳಿಗೂ ಅಧಿಕ ನಷ್ಟ ಅನುಭವಿಸಲು ಕಾರಣಗಳೇನು: | KERCಗೆ ಸಲ್ಲಿಸಲಾದ ಪ್ರಸ್ತಾವನೆಯಲ್ಲಿ 2024-25ನೇ ಸಾಲಿನಲ್ಲಿನ ಆದಾಯ ಕೊರತೆಯನ್ನು ಸರಿದೂಗಿಸಲು ಕೋರಲಾದ ವಿವರಗಳು ಈ ಕೆಳಕಂಡಂತಿವೆ.<br><br>**ಬೆವಿಕಂನ ಆದಾಯ ಕೊರತೆ ಅನುಭವಿಸಲು ಕಾರಣಗಳು :**<br>• ಆಯೋಗವು 2024-25 ರ ಸಾಲಿಗೆ ರೂ. 9.54 ಸರಾಸರಿ ದರವನ್ನು ಪ್ರತಿ ಯೂನಿಟ್ಟಿಗೆ ನಿಗದಿಪಡಿಸಿರುತ್ತದೆ. ಬೆವಿಕಂ ರೂ. 8.59 ಪ್ರತಿ ಯೂನಿಟ್ಟಿಗೆ ಸರಾಸರಿ ಜಕಾತಿ ದರವನ್ನು ತಮ್ಮ ಗ್ರಾಹಕರಿಂದ ಪಡೆದಿರುತ್ತದೆ. ಇದರಿಂದಾಗಿ ರೂ. 1,678 ಕೋಟಿಗಳ ಕಡಿಮೆ ಆದಾಯ ಸಂಗ್ರಹವಾಗಿರುತ್ತದೆ.<br>• ಆಯೋಗವು ರೂ. 27,190 ಕೋಟಿಗಳ ವಿದ್ಯುತ್ ಖರೀದಿ ವೆಚ್ಚವನ್ನು ನಿಗದಿಪಡಿಸಿರುತ್ತದೆ. ಬೆವಿಕಂ ರೂ. 27895 ಕೋಟಿಗಳ ವಿದ್ಯುತ್ ಖರೀದಿ ಮಾಡಿರುತ್ತದೆ. ಇದರಿಂದಾಗಿ, ರೂ. 706 ಕೋಟಿಗಳಷ್ಟು ವಿದ್ಯುತ್ ಖರೀದಿ ವೆಚ್ಚವು ಅಧಿಕವಾಗಿದೆ.<br>• ಆಯೋಗವು ರೂ. 3352 ಕೋಟಿಗಳ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚವನ್ನು ನಿಗದಿಪಡಿಸಿರುತ್ತದೆ. ಬೆವಿಕಂ ರೂ. 3390 ಕೋಟಿಗಳ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚವನ್ನು ಮಾಡಿರುತ್ತದೆ. ಇದರಿಂದಾಗಿ, ರೂ. 38 ಕೋಟಿಗಳಷ್ಟು ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚವು ಅಧಿಕವಾಗಿದೆ.<br>• ಆಯೋಗವು ರೂ. 1780 ಕೋಟಿಗಳ ಬಡ್ಡಿ ಮತ್ತು ಹಣಕಾಸು ವೆಚ್ಚವನ್ನು ನಿಗದಿಪಡಿಸಿರುತ್ತದೆ. ಬೆವಿಕಂ ರೂ. 1837 ಕೋಟಿಗಳ ಬಡ್ಡಿ ಮತ್ತು ಹಣಕಾಸು ವೆಚ್ಚವನ್ನು ಮಾಡಿರುತ್ತದೆ. ಇದರಿಂದಾಗಿ, ರೂ. 57.48 ಕೋಟಿಗಳಷ್ಟು ಬಡ್ಡಿ ಮತ್ತು ಹಣಕಾಸು ವೆಚ್ಚವು ಅಧಿಕವಾಗಿದೆ.<br>• ಆಯೋಗವು ರೂ. 231 ಕೋಟಿಗಳ ಇತರೆ ಆದಾಯವನ್ನು ನಿಗದಿಪಡಿಸಿರುತ್ತದೆ. ಬೆವಿಕಂ ರೂ. 139 ಕೋಟಿಗಳ ಇತರೆ ಆದಾಯವನ್ನು ವಸೂಲಿ ಮಾಡಿರುತ್ತದೆ. ಇದರಿಂದಾಗಿ, ರೂ. 91.47 ಕೋಟಿಗಳಷ್ಟು ಇತರೆ ಆದಾಯ ಕಡಿಮೆಯಾಗಿರುತ್ತದೆ.<br>• ಆಯೋಗವು 9.50% ವಿದ್ಯುತ್ ಸರಬರಾಜು ವೆಚ್ಚವನ್ನು ನಿಗದಿ ಪಡಿಸಿರುತ್ತದೆ. ಬೆವಿಕಂ, 8.51% ವಿದ್ಯುತ್ ಸರಬರಾಜು ವೆಚ್ಚವನ್ನು ಮಾಡಿರುತ್ತದೆ. ಇದರಿಂದಾಗಿ, ಬೆವಿಕಂ ನಷ್ಟ ಕಡಿತದಿಂದ ಉಳಿತಾಯವಾದ ರೂ. 110.05 ಕೋಟಿ (50%) ಗಳನ್ನು ಕ್ಲೇಮ್ ಮಾಡಿದೆ. |
| ಈ) | ಗೃಹ ಬಳಕೆಯ ವಿದ್ಯುತ್ ದರ ಮಾತ್ರವಲ್ಲದೆ ಸ್ಥಿರ ಶುಲ್ಕವನ್ನು (Fixed Charges) 10 ರಿಂದ 20 ರೂಪಾಯಿಗಳವರೆಗೆ ಹೆಚ್ಚಿಸಲು ಉದ್ದೇಶಿಸಲಾಗಿದೆಯೇ:<br><br>ಈಗಾಗಲೇ ಬೆಲೆ ಏರಿಕೆಯಿಂದ ತತ್ತರಿಸಿರುವ ಸಾಮಾನ್ಯ ಜನರಿಗೆ ಮತ್ತು ಸಣ್ಣ ಕೈಗಾರಿಕೆಗಳಿಗೆ ಈ ದರ ಏರಿಕೆಯಿಂದ ಆಗುವ ಹೊರೆ ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | • ದಿನಾಂಕ 29.11.2025ರ ಪ್ರಸ್ತಾವನೆಯಲ್ಲಿ ಗೃಹ ಬಳಕೆ ಪ್ರವರ್ಗದ ಸ್ಥಿರ ಶುಲ್ಕವನ್ನು (Fixed Charges) ಹೆಚ್ಚಿಸಲು ಪ್ರಸ್ತಾಪಿಸಿರುವುದಿಲ್ಲ.<br>• ಸರ್ಕಾರವು ಗೃಹಜ್ಯೋತಿ ಯೋಜನೆಯನ್ನು ಜುಲೈ-2023 ರಿಂದ ಜಾರಿಗೊಳಿಸಲಾಗಿದ್ದು, 1.65 ಕೋಟಿ ಗೃಹ ಬಳಕೆ ಸ್ಥಾವರಗಳ ವಿದ್ಯುತ್ ಬಿಲ್ಲನ್ನು ಸರ್ಕಾರದಿಂದ ಆಗಸ್ಟ್-2023 ರಿಂದ ಮಾರ್ಚ್-2026 ರವರೆಗೆ ರೂ.25,076 ಕೋಟಿ ಭರಿಸಲಾಗಿರುವ ಮೂಲಕ ಜನ ಸಾಮಾನ್ಯರ ಹೊರೆ ಕಡಿಮೆಯಾಗಿದೆ.<br>• ನೇಕಾರರ ವಿದ್ಯುತ್ ಸ್ಥಾವರಗಳಿಗೆ ಸರ್ಕಾರಿ ಆದೇಶ ಸಂಖ್ಯೆ: CI 37 JAKY 2023 ದಿನಾಂಕ: 20.10.2023 ರ ಪ್ರಕಾರ 10 ಹೆಚ್.ಪಿ. ವರೆಗಿನ ಸಂಪೂರ್ಣ ಬಿಲ್ಲನ್ನು ಸರ್ಕಾರದಿಂದ ಭರಿಸುವುದು. ಸರ್ಕಾರಿ ಆದೇಶ ಸಂಖ್ಯೆ: CI 37 JAKY 2023 ದಿನಾಂಕ: |

| | | |
|---|---|---|
| | | 25.09.2024 ರ ಪ್ರಕಾರ 10.01 ಹೆಚ್.ಪಿ. ಯಿಂದ 20 ಹೆಚ್.ಪಿ. ವರೆಗೆ ಬಳಕೆಯ ಪ್ರತಿ ಯೂನಿಟ್‌ಗೆ 3.25 ಪೈಸೆ ಸರ್ಕಾರದಿಂದ ಭರಿಸುವುದು.<br>• ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿನ ಕೈಗಾರಿಕೆಗಳಿಗೆ 20 ಪೈಸೆ ಪ್ರತಿ ಯೂನಿಟ್‌ಗೆ ರಿಯಾಯ್ತಿ ನೀಡಲಾಗಿದೆ.<br>• ಸೋಲಾರ್ ರೂಫ್‌ಟಾಪ್ ಅಳವಡಿಸುವ ಗೃಹಬಳಕೆ ಸ್ಥಾವರಗಳಿಗೆ ಪ್ರತಿ ಕಿ.ವ್ಯಾ. ಗೆ ರೂ. 25 ನಿಗದಿತ ಶುಲ್ಕದ ರಿಯಾಯ್ತಿ (ಮಂಜೂರಾದ ಹೊರೆ 10 ಕಿ.ವ್ಯಾ. ರವರೆಗೆ). |

ಸಂಖ್ಯೆ: ಎನರ್ಜಿ 63 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು